ಅನೇಕ ಜನರಿಗೆ ತೊಂದರೆಯಾಗಿದೆ. ಆದರೆ ಸಭೆಯಲ್ಲಿ ಹೇಳುವಾಗ, ಪತ್ರಿಕೆಯವರಿಗೆ ಹೇಳುವಾಗ, ಇಂತಿಂಥ ಜಾತಿಯವರಿಗೆ ಗಾಯವಾಗಿದೆ ಎನ್ನುವ ಮಾತನ್ನು ನಾವು ಆಡುವುದು ಬೇಡ. ಅದು ಎಲ್ಲರಿಗೂ ಗೊತ್ತಿರುತ್ತದೆ.

ಪ್ರೊ ಎಂ. ಡಿ. ನಂಜುಂಡಸ್ವಾಮಿ : ಕಾನೂನು ಮಂತ್ರಿಗಳೇ, ಒಂದು ನಿಮಿಷ. 10 ಜನ ಹಿಂದುಗಳಿಗೆ ಚೂರಿ ಬಿದ್ದಿದೆ, ಚೂರಿ ಬಿದ್ದಿದೆ ಎಂದು ನಮ್ಮ ಈಶ್ವರಪ್ಪನವರು ಹೇಳುತ್ತಿದ್ದಾರೆ. ಸಭಾಧ್ಯಕ್ಷರೇ, ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಆ ಹತ್ತು ಜನರ ಹೆಸರು ಸಾಯಂಕಾಲ ನಿಮ್ಮ ಉತ್ತರದಲ್ಲಿ ಬಂದರೆ ಒಳ್ಳೆಯದು. ಸುಮ್ಮನೆ ಹಿಂದುಗಳು ಎಂದು ಹೇಳುತ್ತಾರೆ. ಅಲ್ಲೆಲ್ಲ ಚೂರಿ ಹಾಕಿಸಿಕೊಂಡವರು ಶೂದ್ರರೆ, ಒಬ್ಬ ಬ್ರಾಹ್ಮಣನಿಗೂ ಚೂರಿ ಬಿದ್ದಿರುವುದಿಲ್ಲ. ಅದು ಬಹಳ ಮುಖ್ಯವಾಗುತ್ತದೆ. ನಮ್ಮ ಮುಸ್ಲಿಂ ಬಾಂಧವರಿಗೂ ಈ ಮಾತನ್ನು ತಿಳಿಸಬೇಕು. ಹಾಗೆ ಯಾರು ಹಿಂದುಗಳು ಎಂದು ತಿಳಿದುಕೊಂಡಿದ್ದಾರೆ, ನಮ್ಮ ಶೂದ್ರಗೆಳೆಯರು ಅವರಿಗೂ ತಿಳಿಸಬೇಕಾಗುತ್ತದೆ. ಆದ್ದರಿಂದ 10 ಜನ ಯಾರಿಗೆ ಚೂರಿ ಬಿದ್ದಿವೆ ಅವರು ಯಾವ ಯಾವ ಜಾತಿಗೆ ಸೇರಿದವರು ಎನ್ನುವುದನ್ನು ಸ್ವಲ್ಪ ನನಗೆ ತಿಳಿಸಿಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಹಾಗಿದ್ದರೆ, ನೀವು ಬ್ರಾಹ್ಮಣರಿಗೆ ಚೂರಿ ಹಾಕಬೇಕೆಂದು ಹೇಳುವುದಕ್ಕೆ ಹೊರಟರೇನು? ಮಾನ್ಯ ನಂಜುಂಡಸ್ವಾಮಿಯವರು ಹೇಳಿದ್ದರಲ್ಲಿ ಒಂದು ಪಾಯಿಂಟ್ ಇದೆ. ಪಾಪ, ಯಾರು ಚೂರಿ ಏಟಿಗೆ ಬಲಿಬಿದ್ದಿದ್ದಾರಲ್ಲ ಅವರು ಅತಿ ಬಡಜನರು, ಹಿಂದುಳಿದ ಜನಾಂಗದವರು ಅದು ಎರಡೂ ಕಡೆಯಾಗುತ್ತದೆ. ನಾಮದಾರಿ ಸಮಾಜದವರು, ಮತ್ತು ಈಡಿಗಾ ಸಮಾಜದಲ್ಲಿ ಇದು ಆಗಿದೆ. ಅವರು ಬಡವರು, ಅವರ ಮೇಲೆ ಅನ್ಯಾಯವಾಗಿದೆ. ಮೇಲ್‌ವರ್ಗದವರ ಮೇಲೆ ಅನ್ಯಾಯವಾಗಿರುವುದು ನನಗೆ ಕಂಡುಬಂದಿಲ್ಲ. ಅದಕ್ಕಿಂತ ಮೊದಲು ಚೂರಿ ಯಾರಿಗೂ ಹಾಕಬಾರದು, ಅದು ಮೇಲ್‌ವರ್ಗದವರ ಮೇಲಾಗಲಿ, ಹಿಂದುಳಿದ ವರ್ಗದವರ ಮೇಲಾಗಲಿ, ಅದರಲ್ಲಿ ವ್ಯತ್ಯಾಸ ಮಾಡಲಿಕ್ಕೆ ಆಗುವುದಿಲ್ಲ. ಬ್ರಾಹ್ಮಣರಿಗೆ ಚೂರಿ ಹಾಕಿ ಎಂದು ಏತಕ್ಕೆ ಹೇಳಲಿಕ್ಕೆ ಹೊರಟಿದ್ದಾರೋ ನನಗಂತೂ ಗೊತ್ತಾಗುತ್ತಿಲ್ಲ. ಅದೇನೆ ಇರಲಿ, ಎರಡೂ ಕಡೆ ಹೀಗಾಗಿದೆ.

ಶ್ರೀ ಕೆ. ಎಸ್. ಈಶ್ವರಪ್ಪ : ಸರ್ಕಾರಕ್ಕೆ ಕೇಳುವುದು ಇಷ್ಟೆ, ನೀವು ಪರಿಹಾರ ಕೊಡುವ ದಿಕ್ಕಿನಲ್ಲಿ ಎಷ್ಟು ಪ್ರಯತ್ನ ಮಾಡುತ್ತಿದ್ದೀರಿ? ಒಂದೂವರೆ ಸಾವಿರ ರೂಪಾಯಿ ಪರಿಹಾರ ಕೊಟ್ಟಿದ್ದಾರೆ, ಇವರಿಗೆ ಏನೂ ಅನ್ನಿಸುವುದಿಲ್ಲವೆ? ಒಂದೂವರೆ ಸಾವಿರ ರೂಪಾಯಿಂದ ಏನು ಮಾಡುವುದಕ್ಕೆ ಕೊಟ್ಟಿದ್ದಾರೆ ? ಅದಕ್ಕೋಸ್ಕರ ನಾನು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೆಚ್ಚಿನ ಪರಿಹಾರ ಕೊಡುವ ದಿಕ್ಕಿನಲ್ಲಿ ತಾವು ಪ್ರಯತ್ನ ಮಾಡಬೇಕು. ಎರಡನೆಯದಾಗಿ, ಇದರ ಹಿಂದೆ ದೊಡ್ಡ ಷಡ್ಯಂತ್ರ ಇದೆ. ಪತ್ರಿಕೆಯಲ್ಲಿ ಸ್ಪಷ್ಟವಾಗಿ ಬಂದಿದೆ. ಇಡೀ ದೇಶದ ಬಾಂಬ್ ಪ್ರಕರಣದಲ್ಲಿ ಪಾಕಿಸ್ತಾನದ ಕೈವಾಡ ಇದೆ ಎಂದು ಬಂದಿದೆ. ಸರ್ಕಾರ ಈ ದಿಕ್ಕಿನಲ್ಲಿ ಏನು ಪ್ರಯತ್ನ ಮಾಡುತ್ತಿದೆ? ಈ ಬಗ್ಗೆ ಸಾಯಂಕಾಲ ಕೇವಲ ಉತ್ತರ ಕೊಡುತ್ತೇವೆಂದರೆ ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇವೆ.

(ಬಿಜೆಪಿ ಸದಸ್ಯರಾದ ಶ್ರೀ ಈಶ್ವರಪ್ಪ ಮತ್ತು ಶ್ರೀ ನಾರಾಯಣರಾವ್ ಮನಹಳ್ಳಿ ಅವರು ಸಭಾತ್ಯಾಗ ಮಾಡಿದರು)